ಮಂಗಳೂರಿಗೆ ಕುಡಿಯುವ ನೀರು ಪೂರೈಕೆ ಮಾಡುವ ಸಲುವಾಗಿ ಅಣೆಕಟ್ಟಿನ ಕೆಲಸ ಪೂರ್ಣಗೊಳಿಸುವ ಬಗ್ಗೆ

೧೨೭೨ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿಗೆ ಕುಡಿಯುವ ನೀರಿನ ಪೂರೈಕೆಗಾಗಿ ತುಂಬೆಯಲ್ಲಿ ವೆಂಟೆಡ್ ಡ್ಯಾಮ್ ಕಟ್ಟಲು ಪ್ರಾರಂಭಿಸಲಾಗಿದೆಯೇ?

ಆ) ಆ ಅಣೆಕಟ್ಟು ಕಟ್ಟಲು ಪ್ರಾರಂಭ ಮಾಡಿದ್ದಲ್ಲಿ ಅದರ ಕೆಲಸ ಎಷ್ಟರಮಟ್ಟಿಗೆ ಆಗಿದೆ?

ಇ) ಅದಕ್ಕಾಗಿ ಎಷ್ಟು ಹಣ ನಿಗಧಿಗೊಳಿಸಲಾಗಿದೆ ಹಾಗೂ ಈಗ ಎಷ್ಟು ಖರ್ಚು ಮಾಡಲಾಗಿದೆ?

ಈ) ಈ ಅಣೆಕಟ್ಟಿನ ಕೆಲಸ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಇದುವರೆಗೆ ಶೇಕಡ ೯೫ ಭಾಗ ಕೆಲಸ ಪೂರ್ಣಗೊಳಿಸಲಾಗಿದೆ.

ಇ) ಈ ಕೆಲಸವು ಠೇವಣಿ ಕೊಡುಗೆ ಕೆಲಸವಾಗಿದೆ. ಅಂದಾಜು ಮೊತ್ತವಾದ ೧೫೦ ಲಕ್ಷ ರೂ. ಗಳ ಪೈಕಿ ೯೫.೩೩ ಲಕ್ಷ ರೂ. ಗಳನ್ನು ಠೇವಣಿಯಾಗಿ ಸ್ವೀಕರಿಸಲಾಗಿದ್ದು ಈಗಾಗಲೇ ೧೭೯.೪೩ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ಅಂದಾಜಿಗಿಂತ ವೆಚ್ಚವು ಹೆಚ್ಚಾಗಿರುವುದು ಎಸ್. ಆರ್. ನಲ್ಲಿ ಹೆಚ್ಚಳ ಮತ್ತು ಸಾಮಗ್ರಿ ಬೆಲೆಗಳ ಹೆಚ್ಚಳದಿಂದ.

ಈ) ಈ ಕೆಲಸವನ್ನು ೧೯೯೨ರ ಮೇ ತಿಂಗಳ ಹೊತ್ತಿಗೆ ಪೂರ್ಣಗೊಳಿಸಬಹುದು.

ಶ್ರೀ ಬಿ. ಎಂ. ಇದಿನಬ್ಬ:- ಮಾನ್ಯ ಅಧ್ಯಕ್ಷರೇ, ಮಂಗಳೂರಿಗೆ ಕುಡಿಯುವ ನೀರು ಬಹಳ ಕಷ್ಟಕರವಾದ ವಿಚಾರ ಎಂದು ಕಳೆದ ವರ್ಷ ಕೂಡ ನಾವು ಹೇಳಿದ್ದೆವು. ಮತ್ತು ಈ ವೆಂಟೆಡ್ ಡ್ಯಾಮ್‌ನ್ನು ಕಳೆದ ವರ್ಷ ಮುಗಿಸುವ ಅಂದಾಜು ಉಂಟು ಎಂದು ಹೇಳಲಾಗಿತ್ತು. ಆದರೆ ಕಳೆದ ವರ್ಷ ಕೂಡ ಮಂಗಳೂರು ಪಟ್ಟಣಕ್ಕೆ ಕುಡಿಯುವ ನೀರನ್ನು ಲಾರಿಗಳಲ್ಲಿ ಸಾಗಿಸಿ ಕೊಟ್ಟರತಕ್ಕಂಥಾದ್ದು ನಮಗೆ ಗೊತ್ತಿದೆ; ಆದರೆ ಈಗ ೧೯೯೨ನೇ ಮೇ ತಿಂಗಳಲ್ಲಿ ಪೂರ್ತಿ ಮಾಡುವ ಅಂದಾಜು ಉಂಟೆಂದು ಹೇಳಿದ್ದಾರೆ. ಇಷ್ಟು ನಿಧಾನವಾಗಲು ಕಾರಣವೇನು?

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮಂಗಳೂರಿನ ವೆಂಟೆಡ್ ಡ್ಯಾಮ್ ಕೆಲಸ ೮೯ ರಲ್ಲಿ ಪ್ರಾರಂಭವಾಯಿತು. ಇದನ್ನು ಬೇರೆ ಬೇರೆ ಕಡೆ ಇದ್ದಂತ ಡೆಪಾಸಿಟ್ ಸ್ಕೀಂನಲ್ಲಿ ತೆಗೆದುಕೊಳ್ಳಲಾಗಿದೆ. ಈಗಾಗಲೇ ಶೇಕಡ ೯೫ ರಷ್ಟು ಕೆಲಸ ಮುಗಿದುಹೋಗಿದೆ. ಆಲ್ಲಿ ಏನಾಗುತ್ತಿದೆ ಎಂದರೆ, ಎರಡು ವರ್ಷದಿಂದ ಸಾಕಷ್ಟು ಮಳೆ ಇರುವುದರಿಂದ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಈಗ ನದಿಯಲ್ಲಿ ನೀರು ಇದೆ. ಮತ್ತು ಈಗ ಟೆಂಪೊರೆರಿ ಮೆಶರ್ ಆಗಿ ಸ್ಯಾಂಡ್ ಬ್ಯಾಗ್‌ನ್ನು ಇಟ್ಟುಬಿಟ್ಟು ನೀರು ಡ್ರಾ ಮಾಡುತ್ತಿದ್ದೇವೆ. ಇನ್ನು ಐದು ಪರ್‌ಸೆಂಟ್ ಕೆಲಸ

ಮಾತ್ರ ಬಾಕಿ ಇದೆ. ಇನ್ನೊಂದೆರಡು ತಿಂಗಳಲ್ಲಿ ಆ ಕೆಲಸವನ್ನು ಮುಗಿಸುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ:- ಸನ್ಮಾನ್ಯ ಸಭಾಧ್ಯಕ್ಷಣೆಯವರೇ, ಕಳೆದ ವರ್ಷ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ನೀರಿಲ್ಲದೆ ಸುತ್ತಮುತ್ತಲ ಗ್ರಾಮಗಳಿಗೂ ಕೂಡ ಕಷ್ಟ ಬಂದಿತು. ಲಾರಿಯಲ್ಲೆಲ್ಲಾ ನೀರನ್ನು ಕೊಂಡೊಯ್ಯಲಾಗಿತ್ತು. ಈ ವರ್ಷ ಲಾರಿಯಲ್ಲಿ ನೀರನ್ನು ಕೊಂಡೊಯ್ಯುವುದು ತಪ್ಪಬಹುದೇ? ಮೇ ತಿಂಗಳ ಮೊದಲೇ ಈ ಕೆಲಸ ಆಗಬಹುದೇ? ಸ್ವಲ್ಪ ಅವಸರವಾಗಿ ಕೆಲಸ ಆಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಆದಷ್ಟು ಬೇಗನೆ ಆದನ್ನು ಪೂರ್ಣಗೊಳಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಮಂಗಳೂರಿಗೆ ಕುಡಿಯುವ ನೀರಿನ ಕೊರತೆ ೧೯೮೪ ರಿಂದ ಪ್ರಾರಂಭವಾಗಿದೆ. ಜನತಾ ಸರ್ಕಾರ ಇದ್ದಾಗಲೇ ಆದರ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಆದಷ್ಟು ಬೇಗ ವೆಂಟೆಡ್ ಡ್ಯಾಮ್ ಕಟ್ಟತಕ್ಕಂಥ ತೀರ್ಮಾನ ಮಾಡಿತ್ತು. ಆದರೆ ಆಗ ಕೆಲಸ ಪ್ರಾರಂಭ ಮಾಡಲಿಲ್ಲ. ೯೯ರ ನಂತರ ಕೆಲಸ ಪ್ರಾರಂಭ ಮಾಡಿದರೂ ಕೂಡಾ ಕಳೆದ ವರ್ಷ ಆ ಕೆಲಸ ಮುಗಿಸಬೇಕಾಗಿತ್ತು. ಕಳೆದ ವರ್ಷ ನೀರಿನ ಕೊರತೆ ಇರಲಿಲ್ಲ. ಆದರ ಮೊದಲು ಕೊರತೆ ಇತ್ತು. ಈಗ ನೇತ್ರಾವತಿ ಹೊಳೆಯ ಬದಿ ಇರುವ ನಮಗೆಲ್ಲಾ ಗೊತ್ತಿದೆ. ಬಹುಶಃ ಈ ವರ್ಷ ಈ ಕೆಲಸ ಪೂರ್ತಿಯಾಗದಿದ್ದರೆ ಖಂಡಿತವಾಗಿ ಮಂಗಳೂರಿಗೆ ಕುಡಿಯುವ ನೀರಿನ ಸಮಸ್ಯೆ ತುಂಬಾ ದೊಡ್ಡದಾಗಬಹುದು. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ ಆ ಕೆಲಸವನ್ನು ಆದಷ್ಟು ಬೇಗ ಮಾಡದಿದ್ದರೆ ಖಂಡಿತವಾಗಿ ತೊಂದರೆಯಾಗುತ್ತದೆ. ಆದರ ಬಗ್ಗೆ ಸಂಪೂರ್ಣ ಗಮನ ಕೊಟ್ಟು ಈ ವರ್ಷ ಕೆಲಸವಾಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಭರವಸೆ ಕೊಡುವುದು ಮುಖ್ಯವಲ್ಲ. ಕಳೆದ ವರ್ಷ ಕೇಳಿದ್ದಾಗ ಇದನ್ನು ಮಾಡುತ್ತೇವೆ ಎಂದು ಹೇಳಿದ್ದಿರಿ. ಈ ವರ್ಷವೂ ಆದನ್ನೇ ಹೇಳುತ್ತೀರಿ. ಮೇ ತಿಂಗಳೊಳಗೆ ಇದನ್ನು ಸಂಪೂರ್ಣವಾಗಿ ಮಾಡಿ ಮುಗಿಸುತ್ತೀರಾ ಎಂಬುದರ ಬಗ್ಗೆ ನಮಗೆ ಉತ್ತರ ಬೇಕಾಗಿದೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಈ ವರ್ಷ ನೀರಿಗೆ ತೊಂದರೆ ಬರುವುದಿಲ್ಲ. ಏಕೆಂದರೆ, ಈ ವರ್ಷ ಸಾಕಷ್ಟು ನೀರಿದೆ. ನಾವು ಸ್ಯಾಂಡ್ ಬ್ಯಾಗ್ಸ್ ಇಟ್ಟು ಕೆಲಸ ಮಾಡುತ್ತಿದ್ದೇವೆ. ಈ ಮೇ ತಿಂಗಳಿನಲ್ಲಿ ಮುಗಿಸುತ್ತೇವೆ ಎಂದು ಹೇಳಿದ್ದೇನೆ. ಎಲ್ಲಾ ಮುಗಿದು ಹೋಗಿದೆ. ಶೇಕಡಾ ೫ ರಷ್ಟು ಮಾತ್ರ ಬಾಕಿ ಇದೆ. ಒಂದು ವಿಷಯ, ಸುಮಾರು ಜನರು ದುಡ್ಡು ಕೊಡಲಿಕ್ಕೆ ಬಾಕಿ ಇದ್ದಾರೆ. ಏನೆಂದರೆ, ಕಾರ್ಪೊರೇಷನ್‌ನಿಂದ ೨೦ ಲಕ್ಷ ರೂಪಾಯಿ ಬರಬೇಕಾಗಿದೆ. ಮೊದಲು ಎಸ್ಟಿಮೇಟ್ ಆಗಿದ್ದು ೧೫೦ ಲಕ್ಷಕ್ಕೆ, ಈಗ ಎಸ್ಟಿಮೇಟ್ ಜಾಸ್ತಿಯಾಗಿ ೧೭೯ ಲಕ್ಷವಾಗಿದೆ. ಆದರೂ ಕೂಡ ನಾವು ನಮ್ಮ ಬೋರ್ಡ್‌ನಿಂದ ದುಡ್ಡು ಹಾಕಿಬಿಟ್ಟು ಈ ಕೆಲಸ ಮಾಡಿಸುತ್ತಿದ್ದೇನೆ. ಶೇಕಡಾ ೫ ರಷ್ಟು ಬಾಕಿ ಇರುವುದನ್ನು ಮೇ ತಿಂಗಳ ಒಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಕುಡಿಯುವ ನೀರಿನ ಬಗ್ಗೆ ತುಂಬಾ ಗಂಭೀರ ಸಮಸ್ಯೆ ಇದೆ. ಸರ್ಕಾರ ತನ್ನ ಕೈಯಿಂದ ಖರ್ಚು ಮಾಡಿ ಆದಷ್ಟು ಬೇಗ ಪ್ರಾರಂಭ ಮಾಡಲಿ.

ಶ್ರೀ ಕೆ. ಜೆ. ಜಾರ್ಜ್:- ಆದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.